# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ 2018-19ನೇ ಸಾಲಿನ ಆರ್ಥಿಕ ವರ್ಷದ ಜನವರಿ 2019 ಮಾಹೆಯಿಂದ ಮಾರ್ಚ್ 2019ರ ಮಾಹೆವರೆಗಿನ ಅವಧಿಗೆ 4ನೇ ಕಂತಾಗಿ ಗೌರವಧನ ಮೊತ್ತಗಳನ್ನು ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ,

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 116 ಜಿಪಸ 2017, ದಿನಾಂಕ:03-05-2017.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 134 ಜಿಪಸ 2018, ದಿನಾಂಕ:26-04-2018, 24-08-2018 ಮತ್ತು 07-11-2018.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವಂತೆ ರಾಜ್ಯದ ಜಿಲ್ಲಾ/ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡಂತೆ ಗೌರವಧನವನ್ನು ಪರಿಷ್ಕರಿಸಿದೆ.

| | ಗ್ರಾಮ ಪಂಚಾಯತಿ | ತಾಲ್ಲೂಕು ಪಂಚಾಯತಿ | ಜಿಲ್ಲಾ ಪಂಚಾಯತಿ |
|---|---|---|---|
| ಅಧ್ಯಕ್ಷರು | 3,000 | 6,000 | 35,000 |
| ಉಪಾಧ್ಯಕ್ಷರು | 2,000 | 4,000 | 15,000 |
| ಸದಸ್ಯರು | 1,000 | 3,000 | 5,000 |

ಮೇಲೆ ಓದಲಾದ (2)ರ ಆದೇಶಗಳಲ್ಲಿ 2018-19ನೇ ಸಾಲಿಗೆ ಮೊದಲನೇ ಕಂತಾಗಿ ಏಪ್ರಿಲ್-2018ರ ಮಾಹೆಯಿಂದ ಜೂನ್-2018 ಮಾಹೆವರೆಗಿನ ಅವಧಿಗೆ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಲೆಕ್ಕ ಶೀರ್ಷಿಕೆ:2515-00-103-0-98-324(2515-00-198-1-11-300)(ಯೋಜನೇತರ)ರಡಿ ಲಭ್ಯವಿರುವ ಅನುದಾನದಲ್ಲಿ ರೂ.34,54,74,000 (ಮೂವತ್ನಾಲ್ಕು ಕೋಟಿ ಐವತ್ನಾಲ್ಕು ಲಕ್ಷದ ಎಪತ್ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಹಾಗೂ 2ನೇ ಕಂತಾಗಿ ಜುಲೈ 2018 ರಿಂದ ಸೆಪ್ಟೆಂಬರ್ 2018ರ ವರೆಗಿನ ಅವಧಿಗೆ ರೂ.34,54,74,000/- ಹಾಗೂ ಮೂರನೇ ಕಂತಾಗಿ ಅಕ್ಟೋಬರ್-2018ರ ಮಾಹೆಯಿಂದ ಡಿಸೆಂಬರ್-2018 ಮಾಹೆವರೆಗಿನ ಅವಧಿಗೆ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಲಭ್ಯವಿರುವ ಅನುದಾನದಲ್ಲಿ ರೂ.34,42,92,000 (ಮೂವತ್ನಾಲ್ಕು ಕೋಟಿ ನಲವತ್ತೆರಡು ಲಕ್ಷದ ತೊಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಒಂದನೇ ಕಂತಾಗಿ ಬಿಡುಗಡೆ ಮಾಡಿದ ಅನುದಾನ | ಎರಡನೇ ಕಂತಾಗಿ ಬಿಡುಗಡೆ ಮಾಡಿದ ಅನುದಾನ | ಮೂರನೇ ಕಂತಾಗಿ ಬಿಡುಗಡೆ ಮಾಡಿದ ಅನುದಾನ | ಲಭ್ಯವಿರುವ ಅನುದಾನ | 4ನೇ ಕಂತಾಗಿ ಬಿಡುಗಡೆಗೊಳಿಸುವ ಅನುದಾನ |
|---|---|---|---|---|---|---|---|
| 1. | 2515-00-103-0-98-324 (2515-00-198-1-11-300) | 13820.00 | 3454.74 | 3454.74 | 3442.92 | 3467.60 | 3442.92 |

ರಾಜ್ಯದ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ 2018-19ನೇ ಆರ್ಥಿಕ ಸಾಲಿಗೆ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಲೆಕ್ಕ ಶೀರ್ಷಿಕೆ:2515-00-103-0-98-324(2515-00-198-1-11-300) (ಯೋಜನೇತರ) ರಡಿ ಲಭ್ಯವಿರುವ ರೂ.3467.60ಲಕ್ಷಗಳ ಅನುದಾನದಲ್ಲಿ ಪ್ರಸ್ತುತ ನಾಲ್ಕನೇ ಕಂತಾಗಿ ಜನವರಿ-2019 ರಿಂದ ಮಾರ್ಚ್-2019ರ ಅವಧಿಗೆ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಮಾಸಿಕ ಗೌರವಧನ ಒಟ್ಟು ಮೊತ್ತ ರೂ.3442.92ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 134 ಜಿಪಸ 2018, ಬೆಂಗಳೂರು, ದಿನಾಂಕ:16-01-2019.

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, 2018-19ನೇ ಸಾಲಿನ ಜನವರಿ-2019ರ ಮಾಹೆಯಿಂದ ಮಾರ್ಚ್-2019 ಮಾಹೆವರೆಗಿನ ಅವಧಿಗೆ ಗ್ರಾಮ ಪಂಚಾಯತಿಗಳ ಅಧ್ಯಕ್ಷರು,

ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಲೆಕ್ಕ ಶೀರ್ಷಿಕೆ:2515-00-103-0-98-324(2515-00-198-1-11-300) (ಯೋಜನೇತರ)ರಡಿ ಲಭ್ಯವಿರುವ ರೂ.3467.60ಲಕ್ಷಗಳ ಅನುದಾನದಲ್ಲಿ ರೂ.34,42,92,000 (ಮೂವತ್ನಾಲ್ಕು ಕೋಟಿ ನಲವತ್ತೆರಡು ಲಕ್ಷದ ತೊಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಬಿಡುಗಡೆಗೊಳಿಸಿರುವ ಮಾಸಿಕ ಗೌರವಧನದ ಜಿಲ್ಲಾವಾರು ಮೊತ್ತಗಳನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ನೀಡಿದೆ. ಜಿಲ್ಲಾವಾರು ಗೌರವಧನದ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್-ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್)ಕೋಡ್‌ಗಳಿಗೆ ರಾಜ್ಯ ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು(ಟಿ.ಎನ್.ಎಮ್.ಸಿ) ಮೂಲಕ ಅಪ್‌ಲೋಡ್ ಮಾಡಲು ಅನುಮತಿಸಿದೆ.

<u>ಮಾಸಿಕ ಗೌರವಧನದ ಮೊತ್ತಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಪಾವತಿಸುವುದು.</u>

1) ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಆಯಾ ಜಿಲ್ಲೆಗಳ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್) ಕೋಡ್‌ಗಳಿಗೆ ಅಪ್‌ಲೋಡ್ ಮಾಡಿರುವುದರಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಖಜಾನೆಯಿಂದ ತಮ್ಮ ತಮ್ಮ ಮೊತ್ತಗಳನ್ನು ಸೆಳೆಯುವುದು.

2) ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಂಖ್ಯೆಗಳನ್ನು ನಿಖರವಾಗಿ ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯತಿ ನೀಡಬೇಕಾಗಿರುವ ಮೊತ್ತಗಳನ್ನು ಲೆಕ್ಕಹಾಕಿ ಅಂತಹ ಮೊತ್ತಗಳನ್ನು ಗ್ರಾಮ ಪಂಚಾಯತಿಗಳ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಿ ಚುನಾಯಿತ ಪ್ರತಿನಿಧಿಗಳಿಗೆ ಮಾಸಿಕ ಗೌರವಧನಗಳನ್ನು ಪಾವತಿಸಲು ಸೂಚನೆಗಳನ್ನು ನೀಡುವುದು.

3) ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಮೊತ್ತಗಳನ್ನು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಜನವರಿ-2019ರ ಮಾಹೆಯಿಂದ ಮಾರ್ಚ್-2019ರ ಮಾಹೆಗೆ ಮಾಸಿಕ ಗೌರವಧನಗಳನ್ನು ಪಾವತಿಸಲು ಮಾತ್ರ ವಿನಿಯೋಗಿಸುವುದು. ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.

4) ಸದರಿ ಆದೇಶದ ಪ್ರತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್ (http://rdpr.kar.nic.in) ನಲ್ಲಿ ಪಡೆದುಕೊಂಡು ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ಸಕಾಲದಲ್ಲಿ ತುರ್ತಾಗಿ ಪಾವತಿಸಲು ಹಾಗೂ ಒಂದು ವೇಳೆ ತಾಂತ್ರಿಕ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಖಜಾನೆ/ ಟಿ.ಎನ್.ಎಂ.ಸಿಯಲ್ಲಿ ಸಂಬಂಧಿಸಿದ ಅಧಿಕಾರಿ/ನೌಕರರು ಖುದ್ದಾಗಿ ಹಾಜರಾಗಿ ಸದರಿ ದೋಷಗಳನ್ನು ನಿವಾರಿಸಿಕೊಂಡು ಗೌರವಧನವನ್ನು ತಪ್ಪದೇ ಪಾವತಿಸಲು ಸೂಕ್ತ ಕ್ರಮಕೈಗೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 2 ಟಿಎಫ್‌ಪಿ 2018, ದಿನಾಂಕ: 03-04-2018ರಲ್ಲಿ ಆಯಾಯಾ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

16.1.19

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
6. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
7. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
9. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
10. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
11. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

<u>ಪ್ರತಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

# ಅನುಬಂಧ

**ರಾಜ್ಯದ 6022 ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ 2018-19ನೇ ಆರ್ಥಿಕ ಸಾಲಿನ ಜನವರಿ-2019ರ ಮಾಹೆಯಿಂದ ಮಾರ್ಚ್-2019ರ ಮಾಹೆಯವರೆಗಿನ ಅವಧಿಗೆ ನೀಡಬೇಕಾಗಿರುವ ಗೌರವಧನದ ವಿವರಗಳು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 134 ಜಿಪಸ 2018, ಬೆಂಗಳೂರು, ದಿನಾಂಕ:16-01-2019.**

| ಕ್ರ. ಸಂ. | ಜಿಲ್ಲೆಯ ಹೆಸರು | ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ | ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ಗ್ರಾಮ ಪಂಚಾಯತಿ ಉಪಾಧ್ಯಕ್ಷರುಗಳ ಸಂಖ್ಯೆ | ಗ್ರಾಮ ಪಂಚಾಯತಿ ಸದಸ್ಯರುಗಳ ಸಂಖ್ಯೆ | ಮೂರು ತಿಂಗಳ ಅವಧಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ * ಗೌರವಧನ | ಮೂರು ತಿಂಗಳ ಅವಧಿಗೆ ಗ್ರಾಮ ಪಂಚಾಯತಿ ಉಪಾಧ್ಯಕ್ಷರುಗಳಿಗೆ ನೀಡಬೇಕಾಗಿರುವ ** ಗೌರವಧನ | ಮೂರು ತಿಂಗಳ ಅವಧಿಗೆ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ನೀಡಬೇಕಾಗಿರುವ *** ಗೌರವಧನ | ಮೂರು ತಿಂಗಳ ಅವಧಿಗೆ ನೀಡಬೇಕಾಗಿರುವ ಒಟ್ಟು ಗೌರವಧನ |
|---|---|---|---|---|---|---|---|---|---|
| 1 | ಬೆಂಗಳೂರು ನಗರ | 96 | 96 | 96 | 2244 | 864000.00 | 576000.00 | 6732000.00 | 8172000.00 |
| 2 | ಬೆಂಗಳೂರು ಗ್ರಾಮಾಂತರ | 105 | 105 | 105 | 1709 | 945000.00 | 630000.00 | 5127000.00 | 6702000.00 |
| 3 | ರಾಮನಗರ | 127 | 127 | 127 | 1802 | 1143000.00 | 762000.00 | 5406000.00 | 7311000.00 |
| 4 | ಕೋಲಾರ | 156 | 156 | 156 | 2478 | 1404000.00 | 936000.00 | 7434000.00 | 9774000.00 |
| 5 | ಚಿಕ್ಕಬಳ್ಳಾಪುರ | 157 | 157 | 157 | 2231 | 1413000.00 | 942000.00 | 6693000.00 | 9048000.00 |
| 6 | ತುಮಕೂರು | 331 | 331 | 331 | 4737 | 2979000.00 | 1986000.00 | 14211000.00 | 19176000.00 |
| 7 | ಚಿತ್ರದುರ್ಗ | 189 | 189 | 189 | 2948 | 1701000.00 | 1134000.00 | 8844000.00 | 11679000.00 |
| 8 | ದಾವಣಗೆರೆ | 233 | 233 | 233 | 2908 | 2097000.00 | 1398000.00 | 8724000.00 | 12219000.00 |
| 9 | ಶಿವಮೊಗ್ಗ | 271 | 271 | 271 | 2422 | 2439000.00 | 1626000.00 | 7266000.00 | 11331000.00 |
| 10 | ಮೈಸೂರು | 266 | 266 | 266 | 4209 | 2394000.00 | 1596000.00 | 12627000.00 | 16617000.00 |
| 11 | ಚಾಮರಾಜನಗರ | 130 | 130 | 130 | 1907 | 1170000.00 | 780000.00 | 5721000.00 | 7671000.00 |
| 12 | ಹಾಸನ | 267 | 267 | 267 | 3160 | 2403000.00 | 1602000.00 | 9480000.00 | 13485000.00 |
| 13 | ಕೊಡಗು | 104 | 104 | 104 | 1049 | 936000.00 | 624000.00 | 3147000.00 | 4707000.00 |
| 14 | ಮಂಡ್ಯ | 233 | 233 | 233 | 3415 | 2097000.00 | 1398000.00 | 10245000.00 | 13740000.00 |

| | | | | | | | | | |
|---|---|---|---|---|---|---|---|---|---|
| 15 | ಚಿಕ್ಕಮಗಳೂರು | 227 | 227 | 227 | 1909 | 2043000.00 | 1362000.00 | 5727000.00 | 9132000.00 |
| 16 | ಉಡುಪಿ | 158 | 158 | 158 | 2161 | 1422000.00 | 948000.00 | 6483000.00 | 8853000.00 |
| 17 | ದಕ್ಷಿಣ ಕನ್ನಡ | 230 | 230 | 230 | 3004 | 2070000.00 | 1380000.00 | 9012000.00 | 12462000.00 |
| 18 | ಬೆಳಗಾವಿ | 505 | 505 | 505 | 7702 | 4545000.00 | 3030000.00 | 23106000.00 | 30681000.00 |
| 19 | ವಿಜಯಪುರ | 213 | 213 | 213 | 3577 | 1917000.00 | 1278000.00 | 10731000.00 | 13926000.00 |
| 20 | ಬಾಗಲಕೋಟೆ | 198 | 198 | 198 | 2856 | 1782000.00 | 1188000.00 | 8568000.00 | 11538000.00 |
| 21 | ಧಾರವಾಡ | 144 | 144 | 144 | 1776 | 1296000.00 | 864000.00 | 5328000.00 | 7488000.00 |
| 22 | ಗದಗ | 122 | 122 | 122 | 1525 | 1098000.00 | 732000.00 | 4575000.00 | 6405000.00 |
| 23 | ಹಾವೇರಿ | 224 | 224 | 224 | 2745 | 2016000.00 | 1344000.00 | 8235000.00 | 11595000.00 |
| 24 | ಉತ್ತರ ಕನ್ನಡ | 231 | 231 | 231 | 2270 | 2079000.00 | 1386000.00 | 6810000.00 | 10275000.00 |
| 25 | ಬೀದರ್ | 185 | 185 | 185 | 2933 | 1665000.00 | 1110000.00 | 8799000.00 | 11574000.00 |
| 26 | ಬಳ್ಳಾರಿ | 200 | 200 | 200 | 3329 | 1800000.00 | 1200000.00 | 9987000.00 | 12987000.00 |
| 27 | ರಾಯಚೂರು | 180 | 180 | 180 | 3069 | 1620000.00 | 1080000.00 | 9207000.00 | 11907000.00 |
| 28 | ಕಲಬುರ್ಗಿ | 264 | 264 | 264 | 4002 | 2376000.00 | 1584000.00 | 12006000.00 | 15966000.00 |
| 29 | ಯಾದಗಿರಿ | 123 | 123 | 123 | 2124 | 1107000.00 | 738000.00 | 6372000.00 | 8217000.00 |
| 30 | ಕೊಪ್ಪಳ | 153 | 153 | 153 | 2453 | 1377000.00 | 918000.00 | 7359000.00 | 9654000.00 |
| | **ಒಟ್ಟು** | **6022** | **6022** | **6022** | **84654** | **54198000.00** | **36132000.00** | **253962000.00** | **344292000.00** |

ಒಟ್ಟು (ಮೂವತ್ನಾಲ್ಕು ಕೋಟಿ ನಲವತ್ತೆರಡು ಲಕ್ಷದ ತೊಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ)

* ಗ್ರಾ.ಪಂ. ಅಧ್ಯಕ್ಷರಿಗೆ ಮಾಸಿಕ ಗೌರವಧನ ರೂ.3000.00; ** ಗ್ರಾ.ಪಂ. ಉಪಾಧ್ಯಕ್ಷರಿಗೆ ಮಾಸಿಕ ಗೌರವಧನ ರೂ.2000.00; *** ಗ್ರಾ.ಪಂ. ಸದಸ್ಯರಿಗೆ ಮಾಸಿಕ ಗೌರವಧನ ರೂ.1000

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

16-1-19

San(Shashi) G.O 134 ZPS 2018 (Jan to Mar)